ಸೇತುವೆ ನಿರ್ಮಾಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 10 : (87)

ಮಾನ್ಯ ಸದಸ್ಯರ ಹೆಸರು : ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ)

ಉತ್ತರಿಸುವ ಸಚಿವರು : ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
1.	ಜಮಖಂಡಿ ಕ್ಷೇತ್ರದಲ್ಲಿ ಜಮಖಂಡಿ - ಸಾವಳಗಿ ಮಧ್ಯೆ ಜಂಬಗಿ ಹತ್ತಿರ ಇರುವ ಕೃಷ್ಣಾ ನದಿಗೆ ಅಡ್ಡಲಾಗಿ ಬೃಹತ್ ಸೇತುವೆ ನಿರ್ಮಾಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
2.	ಹಾಗಿದ್ದಲ್ಲಿ, ಈ ಕುರಿತು ಸಮೀಕ್ಷೆ ಗಳೇನಾದರೂ ನಡೆದಿವೆಯೇ;	ಇಲ್ಲ.
3.	ಸಮೀಕ್ಷೆ ನಡೆದಿದ್ದರೆ ಅದರ ಅಂದಾಜು ಮೊತ್ತವೆಷ್ಟು ಹಾಗೂ ಅದರ ಕಾರ್ಯಾರಂಭ ಮಾಡುವುದು ಯಾವಾಗ;	ಉದ್ಭವಿಸುವುದಿಲ್ಲ.

ಶ್ರೀ ಕುಲಕರ್ಣಿ ಶ್ರೀಕಾಂತ ಸುಬ್ಬರಾವ : ಮಾನ್ಯ ಅಧ್ಯಕ್ಷರೆ, ಜಮಖಂಡಿ ನಗರ ಒದು ಐತಿಹಾಸಿಕ ನಗರ ಮತ್ತು ಹಿಂದಿನ ಸಂಸ್ಥಾನ. ಭಾರತ ದೇಶದಲ್ಲಿ ಸಂಸ್ಥಾನದ ವಿಲೀನವಾದಂಥ ಸಂದರ್ಭದಲ್ಲಿ ಮೊಟ್ಟಮೊದಲಿಗೆ ಸಂಸ್ಥಾನದ ವಿಲೀನಕ್ಕೆ ಒಪ್ಪಿಗೆ ಕೊಟ್ಟವರು ಜಮಖಂಡಿಯ ಮಹಾರಾಜರು. ಅಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬು ಬೆಳೆಗಾರರು ಮತ್ತು ಜವಳಿ ಉದ್ಯಮದಲ್ಲಿ ತೊಡಗಿದಂಥ ಲಕ್ಷಾಂತರ ಜನರು ಇದ್ದಾರೆ. ಅವರ ಸರಕುಗಳನ್ನು ಸಾಗಾಟ ಮಾಡುವುದಕ್ಕಾಗಿ ಜಮಖಂಡಿಯಿಂದ ಮಹಾರಾಷ್ಟ್ರ ಕಡೆಗೆ ಮತ್ತು ಉತ್ತರ ಭಾರತದ ಕಡೆಗೆ ಪ್ರವಾಸ ಮಾಡುವುದಕ್ಕೆ ಹತ್ತಿರದ ರಸ್ತೆಯೊಂದು ಬೇಕಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಈ ಬಗ್ಗೆ ಬೇಡಿಕೆಯನ್ನಿಟ್ಟು ಮಹಾರಾಜರು ಜಂಬಿಗೆಯ ಹತ್ತಿರ ಒಂದು ಸೇತುವೆಯನ್ನು ನಿರ್ಮಿಸಬೇಕೆನ್ನುವ ಯೋಜನೆ ಇತ್ತು. ಆಗ ಕೆಲವು ರಾಜಕಾರಣಿಗಳ ಪ್ರಭಾವದಿಂದ ಮಂಜೂರಾದಂಥ ಸೇತುವೆ ಚಿಕ್ಕಪಡಸಲಗಿ ಹತ್ತಿರ ನಿರ್ಮಾಣವಾಗಿ ಜಂಬಗಿ ಹತ್ತಿರ ಸೇತುವೆ ಆಗಲಿಲ್ಲ. ಇವತ್ತು ಹುಬ್ಬಳ್ಳಿಯಿಂದ ಪುಣೆ ಮಾರ್ಗಕ್ಕೆ ನೇರವಾಗಿ ಹೋಗಲು ಅತ್ಯಂತ ಸರಳವಾದಂಥ ದಾರಿ ಇದಾಗಿದೆ. ಈ ಸೇತುವೆ ಆಗದೇ ಇರುವುದರಿಂದ

ಸುಮಾರು 50 ಕಿ.ಮೀ. ಸುತ್ತುವರಿದು ಜನರು ಪ್ರಯಾಣ ಮಾಡಬೇಕಾದಂಥ ಅನಿವಾರ್ಯತೆ ಇದೆ. ಹೀಗಾಗಿ ದೊಡ್ಡ ಪ್ರಮಾಣದಲ್ಲಿ ಇಂಧನ ಉಳಿತಾಯ ಮಾಡಬೇಕೆಂದರೆ ಈ ಸೇತುವೆ ನಿರ್ಮಾಣವಾಗಬೇಕೆಂದು ಕಳೆದ ವರ್ಷ ಸರ್ಕಾರಕ್ಕೆ ನಮ್ಮ ಕ್ಷೇತ್ರದ ಹಿಂದಿನ ಶಾಸಕರು ಮನವಿಯನ್ನು ಮಾಡಿಕೊಂಡಿದ್ದರು. ಆ ಸಂದರ್ಭದಲ್ಲಿ ಸುಮಾರು ಈ ರೀತಿಯ ಆರು ಸೇತುವೆಗಳನ್ನು ಮಾಡುವುದಕ್ಕಾಗಿ ಸರ್ಕಾರ ಯೋಚನೆ ಮಾಡಿ ಒಂದು ಪ್ರಸ್ತಾವನೆಯನ್ನು ಕಳುಹಿಸಿತ್ತು. ಉದಾಹರಣೆಗೆ ಸಾಗರ ತಾಲ್ಲೂಕಿನ ಹಸಿರುಮಳ್ಳಿಯಲ್ಲಿ ಶರಾವತಿ ನದಿಗೆ ಒಂದು ಸೇತುವೆ,.....

ಅಧ್ಯಕ್ಷರು : ಶ್ರೀಕಾಂತ ಕುಲಕರ್ಣಿಯವರೆ, ತಾವು ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳಿ. ಹಿನ್ನೆಲೆ ಹೇಳುವುದು ಏನೂ ಬೇಕಾಗಿಲ್ಲ. ಏಕೆಂದರೆ ಸೇತುವೆ ಅವಶ್ಯಕತೆ ಇದೆಯೇ ಎಂದು ನೀವು ಕೇಳಿರುವುದಕ್ಕೆ ಸರ್ಕಾರ ಹೌದು ಎಂದು ಉತ್ತರ ಕೊಟ್ಟಿದೆ.

ಶ್ರೀ ಕುಲಕರ್ಣಿ ಶ್ರೀಕಾಂತ ಸುಬ್ಬಾರಾವ : ಈ ಹಿನ್ನೆಲೆಯನ್ನು ಹೇಳಿದರೆ ಮಾತ್ರ ನನ್ನ ಪ್ರಶ್ನೆಗೆ ಸರಿಯಾದ ಅರ್ಥ ಸಿಗುತ್ತದೆಯಾದ ಕಾರಣ ಹೇಳುತ್ತಿದೇನೆ.

ಅಧ್ಯಕ್ಷರು : ಹೇಳಿ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ : ಜಮಖಂಡಿ ತಾಲ್ಲೂಕಿನಲ್ಲಿ ಒಂದು, ಬಾಗಲಕೋಟೆ ಹತ್ತಿರ ಮಹಾರುದ್ರಪ್ಪನ ಹಳ್ಳಕ್ಕೆ ಒಂದು, ಟಿ. ನರಸೀಪುರದ ಸೋಸಲೆ ಹತ್ತಿರ ಕಾವೇರಿ ನದಿಗೆ ಒಂದು, ಶಿಂಷಾ ನದಿಗೆ ವೈದ್ಯನಾಥಪುರದ ಹತ್ತಿರ ಒಂದು, ಶಿವಮೊಗ್ಗ ಹೊಸಪೇಟೆ ಹತ್ತಿರ ತುಂಗಭದ್ರಾ ನದಿಗೆ ಕೂಡ ಒಂದು ಸೇತುವೆ ಆಗಬೇಕೆನ್ನುವ ಯೋಚನೆ ಸರ್ಕಾರಕ್ಕಿತ್ತೋ ಹೇಗೆ? ಅಕಸ್ಮಾತ್ ಯೋಚನೆ ಇತ್ತಾದರೆ ಅದರ ಬಗ್ಗೆ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ ಎಂಬ ಬಗ್ಗೆ ನಾನು ಸನ್ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರ ಭಾವನೆ ನನಗೆ ಅರ್ಥವಾಗುತ್ತಿದೆ. ಈ ಪ್ರಶ್ನೆಯನ್ನು ಹಿಂದಿನ ಸಲ ವಿಧಾನಸಭೆಯಲ್ಲಿ ಸನ್ಮಾನ್ಯ ಸವದಿಯವರು ಕೇಳಿದ್ದರು. ಅದಕ್ಕೆ ಉತ್ತರ ರೂಪವಾಗಿ ಇದನ್ನು ಮಾಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಟ್ಟಿದ್ದರು ಎನ್ನುವಂಥ ಮಾತುಗಳನ್ನು ಅವರು ಹೇಳುತ್ತಿದ್ದಾರೆ. ಇದನ್ನು ಅತಿ ಶೀಘ್ರದಲ್ಲಿ ಮಾಡಲು ಇದಕ್ಕೆ 20 ಕೋಟಿ ರೂಪಾಯಿಗಳ ಹಣದ ಅವಶ್ಯಕತೆ ಇದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಯಾವುದಾದರೂ ಯೋಜನೆಯೊಳಗೆ ಸೇರಿಸಿ ಇದನ್ನು ಮಾಡಿಸಿಕೊಡುತ್ತೇನೆ ಎನ್ನುವಂಥ ಭರವಸೆಯನ್ನು ಅವರಿಗೆ ಕೊಡಬಯಸುತ್ತೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ ಸುಬ್ಬಾರಾವ : ದಯವಿಟ್ಟು ಈ ವರ್ಷವೇ ಸೇರಿಸಿ. ಏಕೆದಂರೆ ಜಾತಕ ಪಕ್ಷಿಯಂತೆ ಜನರು ಅಲ್ಲಿ ಕಾಯುತ್ತಿದ್ದಾರೆ. ಆ ಒಂದು ಯೋಜನೆಯನ್ನು ತಕ್ಷಣ ಜಾರಿಗೆ ತರುವುದಕ್ಕೆ

ಸರ್ಕಾರ ಏನಾದರೂ ಚಿಂತನೆಯನ್ನು ಮಾಡಿದೆಯೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಈಗಾಗಲೇ ಅವರು ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದಾರೆ. ಮಾನ್ಯ ಉದಾಸಿಯವರೇ, ಇನ್ನೊಮ್ಮೆ ಅವರಿಗೆ ಉತ್ತರ ಹೇಳಿಬಿಡಿ.

ಶ್ರೀ ಸಿ. ಎಂ. ಉದಾಸಿ : ನಾನು ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಅತಿ ಶೀಘ್ರದಲ್ಲಿಯೇ ಮಾಡಿಸಿಕೊಡುವಂಥ ಕೆಲಸವನ್ನು ಪ್ರಯತ್ನ ಮಾಡುತ್ತೇನೆ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಕಳೆದ ವರ್ಷವೇ ಆರ್ಥಿಕ ಇಲಾಖೆಗೆ ಈ ಪ್ರಸ್ತಾವನೆ ಹೋಗಿತ್ತು. ಈಗಾಗಲೇ ದಕ್ಷಿಣ ಕರ್ನಾಟಕದಲ್ಲಿ ಆರರಲ್ಲಿ ನಾಲ್ಕು ಸೇತುವೆಗಳು ಆಗಿಹೋಯಿತು. ಉತ್ತರ ಕರ್ನಾಟಕದ್ದನ್ನು ಮಾತ್ರ ಪೆಂಡಿಂಗ್ ಏಕೆ ಇಟ್ಟಿರಿ?

ಅಧ್ಯಕ್ಷರು : ಈಗಾಗಲೇ ಉದಾಸಿಯವರು ಮಾಡಿಸಿಕೊಡುತ್ತೇವೆಂದು ಹೇಳಿದ್ದಾರೆ. ಸವದಿಯವರೆ ನೀವು ಫಾಲೋ-ಅಪ್ ಮಾಡಿ. ಫಾಲೋ-ಅಪ್ ಮಾಡಿ ಬೆನ್ನುಹತ್ತಿದರೆ ಕೆಲಸವಾಗುತ್ತದೆ.

ಶ್ರೀ ಸಿದ್ದು ಸವದಿ : ಹಿಂದುಳಿದ ಪ್ರದೇಶವಾದ ಉತ್ತರ ಕರ್ನಾಟಕದಲ್ಲಿ ಸೇತುವೆ ಆಗಬೇಕಾಗಿರುವ ಬಗ್ಗೆ ಮೊದಲು ಆದ್ಯತೆಯನ್ನು ಕೊಡಿ.

ಅಧ್ಯಕ್ಷರು : ಮಾನ್ಯ ಉದಾಸಿಯವರೆ, ಸೇತುವೆ ಆಗಬೇಕೆನ್ನುವ ಬಗ್ಗೆ ಇಬ್ಬರು ಶಾಸಕರು ಹೇಳಿದ್ದಾರೆ. ಸೇತುವೆ ಮಾಡಿಕೊಡಿ.